# ಸೋಮಕುಲವಾರಿನಿಧಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 570.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 164.
3. **Note:** Lyrics in both the above references are fully matching.

ರಾಗ: ಸಾವೇರಿ.     ತಾಳ: ಝಂಪೆ

ಸೋಮಕುಲವಾರಿನಿಧಿ ಸೋಮನುದ್ದಾಮ ರಣ
ಭೀಮ ಜಯ ಜಯ ಭೀಮಸೇನ ಭಾಪುರೆ   || ಪ ||

ಮರೆಸಿ ಕೌರವರಿತ್ತ ವಿಷವುಂಡು ತೇಗಿ ಹಸಿ
ದುರಗಗಳ ಮೇಲೆ ಬಿಡಲವನೊರಸಿದೆ
ಸುರನದಿಯೊಳಗೆ ನೂಕೆ ಭರದಲೆದ್ದಾ ಖಳನ
ಪರಿ ಪರಿಯ ಭಂಗಪಡಿಸಿದೆಲ ಭಾಪುರೆ   || ೧ ||

ನರನ ಮಗಧೇಶ ನೀ ಕರೆಸಿ ನಿನ್ನನು ರಣಕೆ
ವರಸೆ ಹರಿಗಿದಿರಲಾ ಖಳನ ಮುರಿದೆ
ಧರೆಯೊಳತಿ ಬಲನೆನಿಪ ಕೀಚಕನ ಸಾನುಜರ
ಮುರಿದು ಮುಟ್ಟಿಗೆಯ ಮಾಡಿದೆಲ ಭಾಪುರೆ   || ೨ ||

ನರನಮಿತ ಗುರು ರಥವ ತಿರುಹಿ ನಭಕೀಡಾಡಿ
ಕುರುಭೂಮಿಪಾನುಜರ ಕುಸುರಿದರಿದೆ
ಹರಿಯ ಶರಕಿದಿರಾದ ಗಿರೀಶನವತಾರವಹ
ಗುರುಸುತನ ಭಂಗಬಡಿದೆಲ ಭಾಪುರೆ   || ೩ ||

ದುರುಳ ದುಶ್ಯಾಸನನ ತೊಡೆಯ ಮೇಲಡಗೆಡಹಿ
ಎರಡು ಬಲದತಿರಥರ ಜರೆದಳಲಿಸಿ

ನರಹರಿಯ ಲೀಲೆಯಿಂದವನುರವ ಬಗಿದು ನಿಡಿ
ಗರುಳ ನಿಜ ಸತಿಗೆ ಮುಡಿಸಿದೆಲ ಭಾಪುರೆ || ೪ ||

ಕುರುಪತಿ ಯಮಜ ಪಾರ್ಥ ನಕುಲ ಸಹದೇವರನು
ಜರೆದು ನಿನ್ನನು ಸಂಗರಕೆ ವರಿಸಲು
ಧರೆ ಭಾರ ಹಾರಿ ಗುರು ಪುರಂದರ ವಿಠಲನಿದಿರ-
ಲುರವಣಿಸೆ ಅವನ ಮುರಿದೆಲ ಭಾಪುರೆ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಪದವು ಪೂರ್ತಿಯಾಗಿ ಭೀಮಾವತಾರವನ್ನೇ ಕುರಿತದ್ದು, ಮುಖ್ಯಪ್ರಾಣನ ದ್ವಾಪರ ಯುಗದ ಅವತಾರವಾದ್ದರಿಂದ ಇಲ್ಲಿ ಸೇರಿಸಿದೆ. ಮಹಾಭಾರತದಲ್ಲಿ ಭೀಮನ ಪಾತ್ರವನ್ನು ಬಣ್ಣಿಸುವ ಪದ ಇದು.

**ನರನ ಮಗಧೇಶ ನೀಕರಿಸಿ...** – ಮಗಧಾಧಿಪತಿ ಜರಾಸಂಧನು ದ್ವಂದ್ವಯುದ್ಧಕ್ಕೆ ನರ (ಅರ್ಜುನ)ನನ್ನು ನೀಕರಿಸಿ (ತಿರಸ್ಕರಿಸಿ) ಭೀಮನೊಂದಿಗೆ ಯುದ್ಧಮಾಡಿದ ಪ್ರಸಂಗ.

**ಕೀಚಕ ಸಾನುಜರ** – ಕೀಚಕ ಮತ್ತು ಅವನ ತಮ್ಮಂದಿರನ್ನು ಕೊಂದ ಪ್ರಕರಣ.

**ಮುಟ್ಟಿಗೆ** – ಮುಷ್ಟಿಕಾ. ಹಿಂಡಿಹಿಪ್ಪೆ ಮಾಡು, ಸುಡುವ ಸೌದೆ.

**ಗುರುಸುತ** – ಅಶ್ವತ್ಥಾಮ.

**ಅಡಗೆಡಹಿ** – ಅಡ್ಡಲಾಗಿ ಬೀಳಿಸಿ.

**ನಿಡಿಗರುಳ** – ಉದ್ದನೆಯ ಕರುಳನ್ನು.

**ನರಹರಿಯ ಲೀಲೆಯಿಂದ...** – ನರಸಿಂಹಾವತಾರದಲ್ಲಿ ವಿಷ್ಣು ಹಿರಣ್ಯಕಶಿಪುವಿಗೆ ಮಾಡಿದಂತೆ. ಯುದ್ಧದಲ್ಲಿ ಭೀಮನು ದುಃಶಾಸನನನ್ನು ಕೊಂದು, ಅವನ ರಕ್ತದಿಂದಲೇ ದ್ರೌಪದಿಯ ಮುಡಿಯನ್ನು ಕಟ್ಟಿ ತನ್ನ ಪೂರ್ವ ಪ್ರತಿಜ್ಞೆಯನ್ನು ಪಾಲಿಸಿದ. ದುಃಶಾಸನನು ಕೌರವಸಭೆಯಲ್ಲಿ ದ್ರೌಪದಿಯನ್ನು ಎಳೆತಂದು ಅವಮಾನಗೊಳಿಸಿದಾಗ ಭೀಮನು ಸೇಡನ್ನು ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದ್ದನು.

**ಕುರುಪತಿ ಯಮಜ –** ಕುರುಪತಿ (ದುರ್ಯೋಧನನು) ಧರ್ಮರಾಯ, ಅರ್ಜುನ, ನಕುಲ ಸಹದೇವರನ್ನು ಜರೆದು ಭೀಮನೊಡನೆ ಯುದ್ಧಕ್ಕೆ ನಿಂತಾಗ (ಭೂಭಾರವನ್ನಿಳಿಸುವ ಕೃಷ್ಣನ ಸೂಚನೆಯಂತೆ) ಆ ಕೌರವನನ್ನು ಕೊಂದ ಪ್ರಸಂಗ.

**Classification:** Keerthane
**Ankita:** guru purandara vittala
**Location:** NA
**Category:** Hanuma Stuti, Bhima Stuti
**Sub-Category:** bhima, kourava, visha, nadi, nara, bhumi, kichaka, Krishna, Narasimha, yama, pandava,
**Pravachana:** NA
**Explanation:** NA